REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 31 | ಸಂಚಿಕೆ : 08 | 29 ಮೇ 2024 | ಬುಧವಾರ | ಪುಟಗಳು : 8 | ಬೆಲೆ : 2/-

## ದಿನಾಂಕ : 27.05.2024 ರಿಂದ ದಿನಾಂಕ : 31.05.2024ರವರೆಗೆ
## ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ



**ಬೆಂಗಳೂರು :** 27.05.2024 ರಿಂದ ದಿನಾಂಕ : 31.05.2024 ರವರೆಗೆ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಏರ್ಪಡಿಸಿದ್ದ ಐದು ದಿನಗಳ ತರಬೇತಿ ಶಿಬಿರವನ್ನು ಮಹಾಮಂಡಳದ ಹಿರಿಯ ನಿರ್ದೇಶಕರಾದ ಶ್ರೀ ರುದ್ರೇಗೌಡರು ಉದ್ಘಾಟಿಸಿ ಮಾತನಾಡಿ ಭಾರತದ ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರೂ ಅವರು ಸಹಕಾರ ಕ್ಷೇತ್ರದ ಬಗ್ಗೆ ವಿಶೇಷ ಒಲವನ್ನು ಇರಿಸಿಕೊಂಡಿದ್ದರು. ಯಾವುದೇ ಕ್ಷೇತ್ರದಲ್ಲಾದರೂ ಯಾರೇ ವ್ಯಕ್ತಿಯಾದರೂ ಯಾವುದೇ ತರಬೇತಿ ಇಲ್ಲದೆ ಕಾರ್ಯಮಾಡಬಹುದು. ಆದರೆ ಸೂಕ್ತ ತರಬೇತಿ ಇಲ್ಲದೆ ಸಹಕಾರ ಕ್ಷೇತ್ರದಲ್ಲಿ ಕಾರ್ಯ ಮಾಡಲು ಸಾಧ್ಯವಾಗದು ಎಂದಿದ್ದರು. ನೆಹರೂ ಅವರ ಮಾತು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಇಂದು ಹೆಚ್ಚು ಪ್ರಸ್ತುತ ಎನಿಸುತ್ತದೆ.

ಬ್ಯಾಂಕಿನ ಪ್ರಗತಿಗೆ ನಾವು ಶ್ರಮಿಸಬೇಕಾದರೆ ನಾವು ಒಳ್ಳೆಯ ತರಬೇತಿ ಪಡೆಯುವುದು ಅತ್ಯವಶ್ಯಕವಾಗಿರುತ್ತದೆ. ಸಹಕಾರ ಕ್ಷೇತ್ರದಲ್ಲಿ ಶಿಕ್ಷಣ-ತರಬೇತಿ, ವಿಚಾರ ಸಂಕಿರಣಗಳು ನಿರಂತರವಾಗಿ ನಡೆಯುತ್ತಿರಬೇಕು. ಬ್ಯಾಂಕಿಂಗ್‌ನಲ್ಲಿ ಪ್ರತಿನಿತ್ಯವೂ ಹೊಸ ಹೊಸ ಅಂಶಗಳನ್ನು ಕಲಿಯುತ್ತಲೇ ಸಾಗಬೇಕಾಗಿದೆ. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅಧಿಕಾರಿ ವರ್ಗದವರು ಉತ್ತಮವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಬ್ಯಾಂಕುಗಳ ಪ್ರಗತಿ ಸಾಧ್ಯವಾಗುತ್ತದೆ. ಪ್ರಯುಕ್ತ, ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ದೀರ್ಘಾವಧಿಯ ತರಬೇತಿಯಲ್ಲಿ ಭಾಗವಹಿಸಿ, ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು. ಕರ್ನಾಟಕ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು ರಾಷ್ಟ್ರಮಟ್ಟದಲ್ಲಿ ತಮ್ಮದೇ ಆದಂತಹ ಬ್ಯಾಂಕನ್ನು ಸ್ಥಾಪಿಸಲು ಹಾಗೂ ಆರ್ಥಿಕ ಮತ್ತು ತಾಂತ್ರಿಕ ಸೌಲಭ್ಯಗಳನ್ನು ನೀಡಲು ಉದ್ದೇಶಿಸಿರುವ NUCFDC (Umbrella organisation for UCB's) ಇದರ ಷೇರುಗಳನ್ನು ಪಡೆದು ಸದಸ್ಯತ್ವ ಹೊಂದುವಂತೆ ಬ್ಯಾಂಕುಗಳಿಗೆ ಮನವಿ ಮಾಡಿದರು.

ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ರಘುನಾಥ ಸಿ. ರವರು ಮಾತನಾಡಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಇಡೀ ರಾಷ್ಟ್ರದಲ್ಲಿಯೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು,



2ನೇ ಪುಟಕ್ಕೆ...

3 ಎಂ.ಸಿ.ಸಿ. ಬ್ಯಾಂಕಿನ ನೂತನ ಆಡಳಿತ ಕಛೇರಿ ಉದ್ಘಾಟನೆ, 112ನೇ ಸ್ಥಾಪಕರ ದಿನಾಚರಣೆ

4 ಭಾರತ ಕೋ-ಆಪರೇಟಿವ್ ಬ್ಯಾಂಕಿಂಗ್ ಸಮ್ಮಿತ ಮತ್ತು ಅವಾರ್ಡ್ಸ್ 2024

6 ರ್‍ಯಾಟ್ ಸಿಸ್ಟಂನಲ್ಲಿ ಬ್ಯಾಂಕ್ ಖಾತೆ ಖೋತಾ; ಒಂದೇ ತಿಂಗಳಲ್ಲಿ ನೂರಾರು ಪ್ರಕರಣ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...

### ಉತ್ತಮ ಮುಂಗಾರು ನಿರೀಕ್ಷೆ : ರೈತರಿಗೆ ಅಗತ್ಯ ನೆರವು ಸಕಾಲದಲ್ಲಿ ದೊರೆಯಲಿ...

ಕಳೆದ ಬಾರಿ ಮಳೆ ಕೊರತೆಯಿಂದಾಗಿ ರಾಜ್ಯದ ರೈತರು ಬಿತ್ತನೆ ಮಾಡಲಾಗದೆ ಭಾರೀ ನಷ್ಟ ಅನುಭವಿಸಿದ್ದರು. ಆದರೆ ಈ ಬಾರಿ ಬಹುತೇಕ ಉತ್ತಮವಾಗಿ ಮುಂಗಾರು ಪೂರ್ವ ಮಳೆಯಾಗುತ್ತಿದೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಡೆ ಈಗಾಗಲೇ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಹವಾಮಾನ ಇಲಾಖೆಯ ವರದಿಯ ಪ್ರಕಾರ; ಮೇ ಅಂತ್ಯಕ್ಕೆ ಕೇರಳಕ್ಕೆ ನೈರುತ್ಯ ಮುಂಗಾರು ಪ್ರವೇಶಿಸುವ ಸಾಧ್ಯತೆ ಇರುವುದರಿಂದ ಜೂನ್ ತಿಂಗಳ ಮೊದಲ ವಾರಕ್ಕೆ ಕರ್ನಾಟಕವನ್ನು ಪ್ರವೇಶಿಸಲಿದೆ ಎಂದಿರುವುದು ಕಳೆದ ವರ್ಷ ಮಳೆಯ ಬರದಿಂದ ಕಂಗೆಟ್ಟಿದ್ದ ಜನತೆಗೆ ಸಂತಸದ ವಿಷಯ.

ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾದ್ದು, ನೈರುತ್ಯ ಮುಂಗಾರು ಮಳೆ ಉತ್ತಮವಾಗಿ ಸುರಿದು ಬಯಲ ಹಸಿರನ್ನು ಮಾತ್ರ ಚಿಗುರಿಸುವುದಿಲ್ಲ, ದೇಶದ ಆರ್ಥಿಕತೆಯನ್ನೇ ಚಿಗುರಿಸುತ್ತದೆ. ಉತ್ತಮ ಮಳೆ ರೈತನ ಮೊಗದಲ್ಲಿ ಉತ್ಸಾಹವನ್ನು ಮೂಡಿಸುತ್ತದೆ ಮಾತ್ರವಲ್ಲ, ನಾಡಿನ ಜನರಲ್ಲಿ ನೆಮ್ಮದಿಯನ್ನೂ ಮೂಡಿಸುತ್ತದೆ. ಉತ್ತಮ ನೈರುತ್ಯ ಮುಂಗಾರು ಎಲ್ಲ ಬಗೆಯ ಚಟುವಟಿಕೆಗಳು ಚುರುಕುಗೊಳ್ಳಲು ಪೂರಕ ವಾತಾವರಣಕ್ಕೆ ಕಾರಣವಾಗುತ್ತದೆ.

ಸೂರ್ಯನ ಬಿರು ಬಿಸಿಲಿಗೆ ಬಸವಳಿದ ಜನ, ಜಾನುವಾರುಗಳು, ಬಿರಿದ ನೆಲ ಒಂದು ಮಳೆ ಬಿದ್ದ ಕೂಡಲೆ ಗ್ರಾಮೀಣ ಭಾಗದಲ್ಲಿ ಆಗುವ ಬದಲಾವಣೆ ಅಭೂತಪೂರ್ವದ್ದು. ಎಂದೂ ನೆಲದಲ್ಲಿ ಬಿದ್ದ ಬೀಜಗಳು ಮೊಳೆತು ಚಿಗುರೊಡೆಯುತ್ತದೆ. ಒಣಗಿ, ಬಾಡಿದ ಮರ, ಗಿಡಗಳು ತಲೆಯೆತ್ತಿ, ಹಚ್ಚ ಹಸಿರಿನಿಂದ ಕಂಗೊಳಿಸುತ್ತವೆ. ಚಿಗುರಿದ ಗಿಡ, ಬಳ್ಳಿಗಳಲ್ಲಿ ಹೂ ಅರಳಿ, ಕಾಯಾಗಿ ಹಣ್ಣುಗಳು ಆಟವಾಡುವ ಮಕ್ಕಳ ಬಾಯಿ ತಣಿಸುತ್ತವೆ. ಎಲ್ಲೆಡೆ ಚಿಟ್ಟೆಗಳ, ದುಂಬಿಗಳ ಹಾರಾಟ ಪ್ರಕೃತಿ ನವ ಚೈತನ್ಯದಿಂದ ಕಂಗೊಳಿಸುತ್ತದೆ.

ನಾವುಗಳು ಮಳೆಯ ಸಂಭ್ರಮವನ್ನು ಮನೆಯಲ್ಲೇ ಬೆಚ್ಚಗೆ ಕುಳಿತು ಆನಂದಿಸುತ್ತೇವೆ. ಆದರೆ, ರೈತ ಹೊಲಕ್ಕಿಳಿದು ನೇಗಿಲು ಹಿಡಿದು ಮಣ್ಣಲ್ಲಿ ಉಳುಮೆ ಮಾಡಲಾರಂಭಿಸುತ್ತಾನೆ. ಇದನ್ನು ಕಂಡ ನಮ್ಮ ರಾಷ್ಟ್ರಕವಿ ಕುವೆಂಪುರವರು ಹೀಗೆ ವರ್ಣಿಸುತ್ತಾರೆ...

**ನೇಗಿಲ ಹಿಡಿದ ಹೊಲದೊಳು ಹಾಡುತ ಉಳುವಾ ಯೋಗಿಯ ನೋಡಲ್ಲಿ**
**ಫಲವನು ಬಯಸದ ಸೇವೆಯೆ ಪೂಜೆಯು ಕರ್ಮವೆ ಇಹ ಪರ ಸಾಧನವು**
**ಕಷ್ಟದೊಳನ್ನವ ದುಡಿವನೆ ತ್ಯಾಗಿ ಸೃಷ್ಟಿ ನಿಯಮದೊಳಗವನೆ ಭೋಗಿ...**

ಎನ್ನುವ ಕಾವ್ಯ ಕೊನೆಯಾಗುವುದು ಹೀಗೆ...

**ನೇಗಿಲ ಕುಲದೊಳಗಡಗಿದೆ ಕರ್ಮ ನೇಗಿಲ ಮೇಲೆಯೆ ನಿಂತಿದೆ ಧರ್ಮ**
**ಉಳುವಾ ಯೋಗಿಯ ನೋಡಲ್ಲಿ...**

ರೈತ ಈಗಾಗಲೇ ಹೊಲ, ಗದ್ದೆ, ತೋಟಗಳಲ್ಲಿ ದುಡಿಯಲಾರಂಭಿಸಿದ್ದಾನೆ, ಕೃಷಿ ಚಟುವಟಿಕೆಗಳಲ್ಲಿ ನಿರತನಾಗಿದ್ದಾನೆ. ಈಗ ನಮ್ಮ ಕೃಷಿ ಇಲಾಖೆ ತಡ ಮಾಡದೆ ರೈತರಿಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ, ಕೃಷಿ ಪರಿಕರಗಳನ್ನು ಸಕಾಲದಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕಿದೆ. ಮಾತ್ರವಲ್ಲ ಕೃಷಿಕರಿಗೆ ಅಗತ್ಯ ಆರ್ಥಿಕ ನೆರವು ನೀಡಲು ಜಿಲ್ಲಾಡಳಿತ ಸಜ್ಜಾಗಬೇಕಿದೆ.

ಬರಲಿರುವ ಮುಂಗಾರು ರೈತರಿಗೆ, ಸಮಸ್ತ ಜನತೆಗೆ ಜೀವ ಚೈತನ್ಯ ತರಲಿ ಎಂದು ಹಾರೈಸುತ್ತೇನೆ.

▸▸ ಸಂಪಾದಕರು

... 1ನೇ ಪುಟದಿಂದ

ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ, ಸಿಬ್ಬಂದಿ ವರ್ಗದವರಿಗೆ ವಿಚಾರ ಸಂಕಿರಣ, ಕಾರ್ಯಾಗಾರಗಳನ್ನು ಏರ್ಪಡಿಸಿ, ಪಟ್ಟಣ ಸಹಕಾರ ಬ್ಯಾಂಕುಗಳ ಬೆಳವಣಿಗೆಗೆ ಶ್ರಮಿಸುತ್ತಿದೆ. ಈ ಐದು ದಿನಗಳ ತರಬೇತಿ ಶಿಬಿರದಲ್ಲಿ ನೀಡುವ ಉಪನ್ಯಾಸಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳು ತಿಳಿದುಕೊಂಡು ಬ್ಯಾಂಕಿನ ಪ್ರಗತಿಗೆ ಶ್ರಮಿಸಬೇಕೆಂದರು.

ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಬಿ.ಎನ್. ಲೋಕೇಶ ರವರು ಮಾತನಾಡಿ ಮಹಾಮಂಡಳದ ಮಾನ್ಯ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ನೇತೃತ್ವದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಪ್ರತಿ ತಿಂಗಳು ತರಬೇತಿ, ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಶ್ರಮಿಸುತ್ತಿದೆ. ಇಂತಹ ತರಬೇತಿ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬ್ಯಾಂಕಿನ ಅಧಿಕಾರಿಗಳು ಭಾಗವಹಿಸಿ, ತರಬೇತಿಯಲ್ಲಿ ನೀಡುವ ಉಪನ್ಯಾಸಗಳನ್ನು ತಿಳಿದುಕೊಂಡು ಬ್ಯಾಂಕಿನ ಪ್ರಗತಿಗೆ ಶ್ರಮಿಸಬೇಕೆಂದರು.

ಐದು ದಿನಗಳ ಕಾರ್ಯಾಗಾರದಲ್ಲಿ ಆರ್‌ಐಸಿಎಂನ ನಿರ್ದೇಶಕರಾದ ಡಾ. ಕೆ. ರವಿಚಂದ್ರನ್, ಬೆಂಗಳೂರು ಆರ್‌ಬಿಐನ ಡಿಎಸ್ ವಿಭಾಗದ ನಿವೃತ್ತ ಪ್ರಧಾನ ವ್ಯವಸ್ಥಾಪಕ ಶ್ರೀ ಕೆ. ಗಣೇಶ್, ಬೆಂಗಳೂರು ಕೆನರಾ ಬ್ಯಾಂಕಿನ ಎಸ್‌ಟಿಸಿಯ ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ಜನಾರ್ಧನ ಸೌಕರ್, ಸಿಂಡಿಕೇಟ್ ಬ್ಯಾಂಕಿನ ಮತ್ತು ದಕ್ಷಿಣ ಭಾರತದ ಬ್ಯಾಂಕುಗಳ ಸಿಬ್ಬಂದಿ ತರಬೇತಿ ಕಾಲೇಜಿನ ನಿವೃತ್ತ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿನಾಯಕ ಎಂ. ಭಟ್, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಹೆಚ್. ಎಸ್. ನಾಗರಾಜಯ್ಯ, ಬೆಂಗಳೂರಿನ ಎಸ್‌ಬಿಐ – ಡಿಎಫ್‌ಎಚ್‌ಐನ ಪ್ರಾಂತೀಯ ಮುಖ್ಯಸ್ಥ ಪ್ರತ್ಯೂಶ ಬಕ್ಷಿ, ಕರ್ನಾಟಕ ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯ, ಜಂಟಿ ನಿರ್ದೇಶಕರಾದ ಶ್ರೀ ಕೆ. ಶ್ರೀಧರ, ಚಾರ್ಟರ್ಡ್ ಅಕೌಂಟೆಂಟ್ ರವರಾದ ಶ್ರೀ ಸುಜಯ ಕೆ.ಎನ್. ರವರುಗಳು ಉಪನ್ಯಾಸ ನೀಡಲಿದ್ದಾರೆ. ಪ್ರಾರಂಭದಲ್ಲಿ ತರಬೇತಿ ಶಿಬಿರಕ್ಕೆ ಆಗಮಿಸಿದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಆರ್‌ಐಸಿಎಂನ ಉಪ ನಿರ್ದೇಶಕಿ ಶ್ರೀಮತಿ ಸೌಮ್ಯ ಎಸ್. ರವರು ಸ್ವಾಗತಿಸಿದರು. ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಚಂದ್ರಮೌಳಿ ಎಸ್. ರವರು ವಂದನಾರ್ಪಣೆ ಸಲ್ಲಿಸಿದರು. ಈ ತರಬೇತಿ ಶಿಬಿರದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ 35 ಪ್ರತಿನಿಧಿಗಳು ಭಾಗವಹಿಸಿದ್ದರು.

## ಎಂ.ಸಿ.ಸಿ. ಬ್ಯಾಂಕಿನ ನೂತನ ಆಡಳಿತ ಕಛೇರಿ ಉದ್ಘಾಟನೆ, 112ನೇ ಸ್ಥಾಪಕರ ದಿನಾಚರಣೆ

ಎಂಸಿ.ಸಿ. ಬ್ಯಾಂಕಿನ ನೂತನ ನವೀಕೃತ ಅತ್ಯಾಧುನಿಕ ಸುಸಜ್ಜಿತ ಆಡಳಿತ ಕಛೇರಿಯ ಉದ್ಘಾಟನೆ ಹಾಗೂ ಬ್ಯಾಂಕಿನ 112ನೇ ಸಂಸ್ಥಾಪಕರ ದಿನಾಚರಣೆಯ ಸಮಾರಂಭ ದಿನಾಂಕ : 10.05.2024ರಂದು ನೆರವೇರಿತು. ನೂತನ ಸುಸಜ್ಜಿತ ಆಡಳಿತ ಕಛೇರಿಯನ್ನು ಬ್ಯಾಂಕಿನ ಅಧ್ಯಕ್ಷ ಶ್ರೀ ಅನಿಲ್ ಲೋಬೊ ಉದ್ಘಾಟಿಸಿದರು.

ಅವರ್ ಲೇಡಿ ಅಫ್ ಮಿರಾಕಲ್ಸ್ ಮಿಲಾಗ್ರಿಸ್ ಚರ್ಚ್‌ನ ಧರ್ಮಗುರು ವಂ. ಬೊನವೆಂಚರ್ ನಜರೆತ್ ನೂತನ ಕಛೇರಿಯನ್ನು ಆಶೀರ್ವಚಿಸಿದರು.



ನಂತರ ನಡೆದ ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರ ರತ್ನ ಅನಿಲ್ ಲೋಬೊ ವಹಿಸಿದ್ದರು. ಅವರ್ ಲೇಡಿ ಅಫ್ ಮಿರಾಕಲ್ಸ್ ಮಿಲಾಗ್ರಿಸ್ ಚರ್ಚ್‌ನ ಧರ್ಮಗುರು ವಂ. ಬೊನವೆಂಚರ್ ನಜರೆತ್, ಲೂರ್ಡ್ಸ್ ಸೆಂಟ್ರಲ್ ಸ್ಕೂಲ್‌ನ ಪ್ರಾಂಶುಪಾಲ ವಂ. ರೋಬರ್ಟ್ ಡಿಸೋಜ, ಹಿರಿಯ ನ್ಯಾಯವಾದಿ ಶ್ರೀ ಕ್ಲಾರೆನ್ಸ್ ಪ್ಯಾಸ್, ಉಡುಪಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಕ್ಲಿಫರ್ಡ್ ಲೋಬೊ, ಹಿರಿಯ ನ್ಯಾಯವಾದಿ ಶ್ರೀ ಎಂ.ಪಿ. ನೋರೊನ್ಹಾ ಅತಿಥಿಗಳಾಗಿದ್ದರು. ಉಪಾಧ್ಯಕ್ಷ ಶ್ರೀ ಜೆರಾಲ್ಡ್ ಡಿಸಿಲ್ವಾ, ಮಹಾಪ್ರಬಂಧಕ ಶ್ರೀ ಸುನಿಲ್ ಮಿನೇಜಸ್ ವೇದಿಕೆಯಲ್ಲಿದ್ದರು.

ಬ್ಯಾಂಕಿನ ನಿರ್ದೇಶಕರಾದ ಅನಿಲ್ ಪತ್ರಾವೊ, ಹೆರಾಲ್ಡ್ ಮೊಂತೇರೊ, ಎಲ್‌ರೊಯ್‌ಕ್ರಾಸ್ಟೊ, ರೋಶನ್ ಡಿಸೋಜ, ಡಾ। ಜೆರಾಲ್ಡ್ ಪಿಂಟೊ, ಅಂಡ್ರ್ಯುಡಿಸೋಜ, ಡೆವಿಡ್‌ಡಿಸೋಜ, ಜೆ.ಪಿ.ರೊಡ್ರಿಗಸ್, ಮೆಲ್ವಿನ್ ವಾಸ್, ವಿನ್ಸೆಂಟ್ ಲಸ್ರಾದೊ, ಸಿ.ಜಿ.ಪಿಂಟೊ, ಐರಿನ್ ರೆಬೆಲ್ಲೊ, ಸುಶಾಂತ್ ಸಲ್ಡಾನ್ಹಾ, ಶರ್ಮಿಳಾ ಮಿನೇಜಸ್, ಫೆಲಿಕ್ಸ್ ಡಿಕ್ರುಜ್ ಆಲ್ವಿನ್ ಪಿ. ಮೊಂತೇರೊ ಹಾಜರಿದ್ದರು, ಬ್ಯಾಂಕಿನ ಮಹಾಪ್ರಬಂಧಕ ಸುನಿಲ್ ಮಿನೇಜಸ್ ವಂದಿಸಿದರು, ಮನು ಬಂಟ್ವಾಳ ನಿರೂಪಿಸಿದರು.

## ಹೊನ್ನಾವರ ಅರ್ಬನ್ ಬ್ಯಾಂಕಿನ 105 ವರ್ಷಗಳ ಯಶಸ್ವಿ ಸೇವೆ ಕಾರ್ಯಕ್ರಮ

ಹೊನ್ನಾವರ ಅರ್ಬನ ಬ್ಯಾಂಕಿನ 105 ವರ್ಷಗಳ ಯಶಸ್ವಿ ಸೇವೆಯ ಕುರಿತಾದ ಕಾರ್ಯಕ್ರಮ ತಾ : 19–05–2024 ರವಿವಾರ ಬ್ಯಾಂಕಿನ ಮೇಲ್ಮಹಡಿಯಲ್ಲಿನ ಎಂ.ಎ. ಕಿನಿ ಮತ್ತು ಎಲ್.ಕೆ.ಎಸ್. ಶಾನ್‌ಭಾಗ್ ಷರಾಫ್ ಹಾಲ್ ನಲ್ಲಿ ಜರುಗಿತು. ಬ್ಯಾಂಕಿನ ಹಿಂದಿನ ಅಧ್ಯಕ್ಷರೂ ಹಾಗೂ ಹಿರಿಯ ನ್ಯಾಯವಾದಿಗಳಾದ ಶ್ರೀಯುತ ಡಿ. ಎ. ಕಾಮತ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಅವರು ಮಾತನಾಡುತ್ತ ಬ್ಯಾಂಕಿನ ಇಲ್ಲಿಯವರೆಗಿನ ಪ್ರಗತಿಯ ಬಗ್ಗೆ ಶ್ಲಾಘಿಸಿದರು ಹಾಗೂ ಮುಂದಿನ ದಿನಗಳಲ್ಲಿ ಬ್ಯಾಂಕು ಹೆಚ್ಚಿನ ಸಾಧನೆ ಮಾಡಲು ಕರೆ ನೀಡಿದರು.

ಬ್ಯಾಂಕಿನ ಸಂಸ್ಥಾಪಕರಾದ ಎಂ.ಎ. ಕಿನಿ ಮತ್ತು ಎಲ್.ಕೆ.ಎಸ್. ಷರಾಫ್ ಇವರ ಭಾವಚಿತ್ರಕ್ಕೆ ಎಲ್ಲರೂ ಪುಷ್ಪವನ್ನು ಸಮರ್ಪಿಸಿದರು. 105 ವರ್ಷಗಳ ಯಶಸ್ವಿ ಸೇವೆಯ ಬಗ್ಗೆ ಕೇಕ್ ಕತ್ತರಿಸಿ ಸಂಭ್ರಮ ಆಚರಿಸಲಾಯಿತು. ಕುಮಾರಿ ಮಹಾಮ್ಮಾಯಾ ಕಾಮತ್ ಇವರ ಪ್ರಾರ್ಥನೆ ಮತ್ತು ಸ್ವಾಗತ ಗೀತೆಯೊಂದಿಗೆ ಸಭಾ ಕಾರ್ಯಕ್ರಮವು ಪ್ರಾರಂಭವಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಘವ ವಿಷ್ಣು ಬಾಳೇರಿ ಸ್ವಾಗತಿಸಿ, 105 ವರ್ಷ ಪೂರೈಸಿದ ಬ್ಯಾಂಕು ಸಾಮಾಜಿಕ ಕಳಕಳಿ ಹೊಂದಿದೆ ಎಂದು ತಿಳಿಸುತ್ತಾ, ಬ್ಯಾಂಕಿನ ಸಿಬ್ಬಂದಿಗಳ ಸೇವೆಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ಯಾಂಕಿನ ಇಲ್ಲಿಯವರೆಗಿನ ಸಾಧನೆಯ ಬಗ್ಗೆ ಶ್ರಮಿಸಿದ ಬ್ಯಾಂಕಿನ ಹಿಂದಿನ ನಿರ್ದೇಶಕ ಮಂಡಳದ ಸದಸ್ಯರನ್ನು ಹಾಗೂ ಸಿಬ್ಬಂದಿಗಳನ್ನು ಸ್ಮರಿಸಿದರು.




ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಾಜೀವ ಗೋವಿಂದ ಶ್ಯಾನಭಾಗ ಅತಿಥಿಗಳನ್ನು ಪರಿಚಯಿಸಿ ವರದಿಯನ್ನು ವಾಚಿಸಿದರು.

ಈ ಸುಸಂದರ್ಭದಲ್ಲಿ 105 ದಿವಸಗಳ ಅವಧಿಗೆ 7.75% ಬಡ್ಡಿ ನೀಡುವ ವಿಶೇಷ ಠೇವು ಯೋಜನೆಗೆ ಚಾಲನೆ ನೀಡಲಾಯಿತು.

ಬ್ಯಾಂಕಿನ ನಿರ್ದೇಶಕರಿಗೆ ಹಾಗೂ ಸಿಬ್ಬಂದಿಗಳಿಗೆ ನುರಿತ ತರಬೇತುದಾರರಾದ ಶ್ರೀ ಮಹೇಶ ಮಶಾಲ ರವರಿಂದ ತರಬೇತಿಯನ್ನು ಏರ್ಪಡಿಸಲಾಗಿತ್ತು. ಬ್ಯಾಂಕಿನ ಪ್ರಭಾರ ಕಾರ್ಯನಿರ್ವಾಹಕ ಶ್ರೀ ಆರ್.ಎಸ್. ಭಾಗ್ವತ ವಂದಿಸಿದರು. ಬ್ಯಾಂಕಿನ ಲೇಖಾಪಾಲ ಶ್ರೀ ಧನಂಜಯ ಪೈ ನಿರ್ವಹಿಸಿದರು.

# ಭಾರತ ಕೋ-ಆಪರೇಟಿವ್ ಬ್ಯಾಂಕಿಂಗ್ ಸಮ್ಮಿತ ಮತ್ತು ಅವಾರ್ಡ್ಸ್ 2024



**ಮುಂಬಯಿ** : ಬಿ2ಬಿ ಸಂಸ್ಥೆಯು ಭಾರತ ಕೋ-ಆಪರೇಟಿವ್ ಬ್ಯಾಂಕಿಂಗ್ ಸಮ್ಮಿತ್ ಮತ್ತು ಅವಾರ್ಡ್ಸ್ 2024ನ್ನು ದಿನಾಂಕ : 22.05.2024 ರಂದು ಮುಂಬಯಿನಲ್ಲಿ ಏರ್ಪಡಿಸಿದ್ದರು. ಈ ಸಮ್ಮಿತ್‌ನಲ್ಲಿ ಸಾಫ್ಟ್‌ವೇರ್ ಸಂಸ್ಥೆಗಳು, ಬ್ಯಾಂಕಿಂಗ್ ತಜ್ಞರು ಭಾಗವಹಿಸಿದ್ದರು.

ಈ ಸಮ್ಮಿತ್‌ನ ಮುಖ್ಯ ಅತಿಥಿಗಳಾಗಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಲಕ್ಷ್ಮೀದಾಸ್, ನ್ಯಾಫಕಬ್‌ನ ನಿರ್ದೇಶಕರಾದ ಶ್ರೀಮತಿ ಅಲಕಾ ಶ್ರೀವಾಸ್ತವ, ಬಿ2ಬಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಆಶಿಸ್ ಶ್ರೀವಾತ್ಸವ, ಶ್ರೀ ಪ್ರಿಯಾನ್ಶೋ ಶರಾವತ, ಶ್ರೀ ಪ್ರಿಯಾನ್ಶೋ ಚೌದರಿ ಹಾಗೂ ಗಣ್ಯರು ಪಾಲ್ಗೊಂಡಿದ್ದರು.

# ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕಿಗೆ "Best Urban Co-operative Bank" ಮತ್ತು "Best Digital Payments Initiative" ರಾಷ್ಟ್ರೀಯ ಪ್ರಶಸ್ತಿ

ಇತ್ತೀಚಿಗೆ ಮುಂಬಯಿಯ ಹೋಟೆಲ್ ಲಲಿತ್‌ನಲ್ಲಿ ನಡೆದ ಭಾರತ್ ಕೋ–ಆಪರೇಟಿವ್ ಬ್ಯಾಂಕಿಂಗ್ ಸಮ್ಮಿತ್–2024ರಲ್ಲಿ ಸಹಕಾರ ಕ್ಷೇತ್ರದಲ್ಲಿನ ವಿಶಿಷ್ಟ ಸಾಧನೆಯನ್ನು ಪರಿಗಣಿಸಿ ರಾಷ್ಟ್ರ ಮಟ್ಟದ ಭಾರತ್ ರತ್ನ ಸಹಕಾರಿತ ಸಮ್ಮಾನ್–2024 ಸಮಾರಂಭದಲ್ಲಿ "Best Urban Co-operative Bank" ಮತ್ತು "Best Digital Payments Initiative" ರಾಷ್ಟ್ರೀಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಕೇಂದ್ರ ಸರಕಾರದ ಮಾಹಿತಿ ಹಾಗೂ ಸಂವಹನ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಸುಮ್ನೇಶ್ ಜೋಷಿಯವರು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯರವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ಹಾಗೂ ಸಿಸ್ಟಮ್ ಅಡ್ಮಿನ್ ಶ್ರೀ ಸಂತೋಷ್ ಉಪಸ್ಥಿತರಿದ್ದರು.



# ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕಿಗೆ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ಪ್ರಶಸ್ತಿ



**ಪುಣೆ** : ದಿನಾಂಕ : 08.05.2024 ರಂದು ಪುಣೆಯಲ್ಲಿ ಜರುಗಿದ 8ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮೇಳನ–2024 ಕಾರ್ಯಕ್ರಮದಲ್ಲಿ ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕಿಗೆ ಅತ್ಯುತ್ತಮ ಕೋ–ಆಪರೇಟಿವ್ ಬ್ಯಾಂಕ ಮತ್ತು ಬೆಸ್ಟ್ ಡಾಟಾ ಸೆಂಟರ್ ಪ್ರಶಸ್ತಿಯನ್ನು ಅಂಬ್ರೆಲಾ ಅರ್ಗನೈಜೇಷನ್ ಚೇರಮನ್ ಮತ್ತು ನ್ಯಾಪಕಬ್‌ನ ನಿರ್ದೇಶಕರಾದ ಶ್ರೀ ಜ್ಯೋತೀಂದ್ರ ಮೆಹತಾರವರು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಂತೋಷಕುಮಾರ್ ಶೆಟ್ಟಿರವರಿಗೆ ನೀಡಿದರು. ಈ ಸಮಾರಂಭದಲ್ಲಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಮಂಜುನಾಥ ಶೆಟ್ಟಿ, ಮತ್ತಿತರರು ಉಪಸ್ಥಿತರಿದ್ದರು.

# ಎಲ್.ಐ.ಸಿ ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ವರ್ಷದ ಅತ್ಯುತ್ತಮ ಪ್ರಶಸ್ತಿ





ಪುಣೆಯ ವೆಸ್ಟಿನ್ ಹೋಟೆಲ್‌ನಲ್ಲಿ ದಿನಾಂಕ : 08–05–2024ರಂದು "8th All India Urban Cooperative Banking Summit in 2024" ಕಾರ್ಯಕ್ರಮದಲ್ಲಿ ಉಡುಪಿಯ ಎಲ್.ಐ.ಸಿ. ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕಿಗೆ "ಬೆಸ್ಟ್ ಡಿಜಿಟಲ್ ಬ್ಯಾಂಕು 2024" ಹಾಗೂ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಶಶಿಕಲಾ ರವರಿಗೆ "ಅತ್ಯುತ್ತಮ ಮುಖ್ಯಕಾರ್ಯನಿರ್ವಹಣಾಧಿಕಾರಿ" ಪ್ರಶಸ್ತಿಯನ್ನು ಅಂಬ್ರೆಲ್ಲಾ ಆರ್ಗನೈಜೇಷನ್ ಚೇರ್‌ಮೆನ್ ಮತ್ತು ನ್ಯಾಫಕಬ್‌ನ ನಿರ್ದೇಶಕರಾದ ಶ್ರೀ ಜ್ಯೋತೀಂದ್ರ ಮೆಹ್ತಾ ಮತ್ತು ಕ್ರೈಸ್ಟ್ ಇನ್ಫೋಮೀಡಿಯಾ ಸಂಸ್ಥಾಪಕರು ಹಾಗೂ ಸಿಇಓ ಶ್ರೀ ಗೌತಮ ನವೀನ್‌ರವರು ಪ್ರಶಸ್ತಿ ನೀಡಿ ಗೌರವಿಸಿದರು.

ಅವಾರ್ಡ್‌ನ್ನು ಬ್ಯಾಂಕಿನ ಪರವಾಗಿ ನಿರ್ದೇಶಕರಾದ ಶ್ರೀಮತಿ ಮಂಜುಳಾ ಭಾರತೀಶ್, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಶಶಿಕಲಾ ಪಡಕೊಂಡರು.

# ಎಲ್.ಐ.ಸಿ ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕಿಗೆ "ಬೆಸ್ಟ್ ಸಿ.ಬಿ.ಎಸ್ ಇಂಪ್ಲಿಮೆಂಟೇಶನ್ ಪ್ರಶಸ್ತಿ"

**ಮುಂಬೈ** : ದಿನಾಂಕ : 22–05–2024ರಂದು ಮುಂಬೈಯ ಲಲಿತ್ ಹೊಟೇಲ್ ಇಲ್ಲಿ Bharat Cooperative Banking Summit & Awards 2024 ಕಾರ್ಯಕ್ರಮದಲ್ಲಿ ಉಡುಪಿಯ ಎಲ್.ಐ.ಸಿ ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕಿಗೆ "ಬೆಸ್ಟ್ ಸಿ.ಬಿ.ಎಸ್ ಇಂಪ್ಲಿಮೆಂಟೇಶನ್" ವಿಭಾಗದಲ್ಲಿ ಪ್ರಶಸ್ತಿಯನ್ನು ಸುಮ್ನೇಶ್ ಜೋಶಿ, ಭಾರತ ಸರ್ಕಾರದ ಡೈರೆಕ್ಟರ್ ಜನರಲ್ ಡೆಪ್ಯೂಟಿ ಮಿನಿಸ್ಟ್ರಿ ಆಫ್ ಕಮ್ಯುನಿಕೇಶನ್ಸ್ ಮತ್ತು ಐಟಿ ರವರು ಪ್ರಶಸ್ತಿ ನೀಡಿ ಗೌರವಿಸಿದರು.



ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ ನಿರ್ದೇಶಕರಾದ ಶ್ರೀ ವಸಂತ್‌ಕುಮಾರ್ ಪಿ ಮತು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಶಶಿಕಲಾ ಬ್ಯಾಂಕಿನ ಪರವಾಗಿ ಪ್ರಶಸ್ತಿಯನ್ನು ಪಡಕೊಂಡರು. ಕಳೆದ 62 ವರ್ಷಗಳಿಂದ ಎಲ್.ಐ.ಸಿ ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕ್ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುತ್ತಾ ಬಂದಿದೆ. ಎಲ್.ಐ.ಸಿ ಎಂಪ್ಲಾಯೀಸ್ ಕೋ–ಆಪರೇಟಿವ್ ಬ್ಯಾಂಕ್ ವಿಶ್ವಾಸಾರ್ಹತೆ ಹಾಗೂ ರಚನಾತ್ಮಕವಾದ ಕೆಲಸಗಳನ್ನು ಅವಲೋಕಿಸಿ ಈ ಪ್ರಶಸ್ತಿಯನ್ನು ಅರ್ಪಿಸಿದೆ.

ಲಿಕೋ ಬ್ಯಾಂಕು ಉಡುಪಿನಲ್ಲಿ ತನ್ನದೇ ಆದ ಡೇಟಾ ಸೆಂಟರನ್ನು ಅನುಷ್ಠಾನಗೊಳಿಸಿರುವ ಉಡುಪಿ ಜಿಲ್ಲೆಯ ಏಕೈಕ ಕೋ–ಅಪರೇಟಿವ್ ಬ್ಯಾಂಕು ಆಗಿದ್ದು, ತನ್ನದೇ ಆದ ಎ.ಟಿ.ಎಮ್. ಅಳವಡಿಸಿರುವುದು ಅಲ್ಲದೇ ಅತ್ಯಾಧುನಿಕ ತಂತ್ರಜ್ಞಾನವನ್ನು ಮೊಬೈಲ್ ಬ್ಯಾಂಕಿಂಗ್, ಯು.ಪಿ.ಐ. ಇತ್ಯಾದಿ ಕಾರ್ಯಗತಗೊಳಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿರುತ್ತದೆ. ಇದಲ್ಲದೇ ಬ್ಯಾಂಕು ತನ್ನದೇ ಆದ ಡಿಸಾಸ್ಟರ್ ರಿಕವರಿ ಸೆಂಟರ್ ಸಹ ಅನುಷ್ಠಾನಗೊಳಿಸಿರುತ್ತದೆ.

# ರ್‍ಯಾಟ್ ಸಿಸ್ಟಂನಲ್ಲಿ ಬ್ಯಾಂಕ್ ಖಾತೆ ಖೋತಾ; ಒಂದೇ ತಿಂಗಳಲ್ಲಿ ನೂರಾರು ಪ್ರಕರಣ

ತಂತ್ರಜ್ಞಾನ ಮುಂದುವರಿದಷ್ಟು ವಂಚಕರು ಮತ್ತೊಂದು ದಾರಿಯ ಮೂಲಕ ತನ್ನ ವಂಚನಾ ಕೃತ್ಯವನ್ನು ಮುಂದುವರಿಸುತ್ತಿದ್ದು, ಗ್ರಾಹಕರಿಗೆ ನಿಜಕ್ಕೂ ಇದೊಂದು ಸವಾಲಾಗಿದೆ. ಸೈಬರ್ ವಂಚಕರು ರ್‍ಯಾಟ್ ಸಿಸ್ಟಂ ದುರ್ಬಳಕೆ ಮಾಡಿಕೊಂಡು ಬ್ಯಾಂಕ್ ಖಾತೆಗೆ ಕನ್ನ ಹಾಕಿ ಕೋಟ್ಯಂತರ ರೂಪಾಯಿ ವಂಚನೆ ಮಾಡಿರುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ.

### ಏನಿದು ರ್‍ಯಾಟ್ ಸಿಸ್ಟಂ?

ಸೈಬರ್ ವಂಚಕರು ಆರ್‌ಎಟಿ (ರಿಮೋಟ್ ಎಕ್ಸೆಸ್ ಟೂಲ್ಸ್) ಬಳಸಿಕೊಂಡು ಆಂಡ್ರಾಯ್ಡ್ ಆಪ್ ಸಿದ್ಧಪಡಿಸಿ ವ್ಯಾಟ್ಸ್ ಅಪ್ ಮೂಲಕ ಬ್ಯಾಂಕ್ ಖಾತೆಗಳಿಗೆ ಲಿಂಕ್ ಆಗಿರುವ ಮೊಬೈಲ್ ನಂಬರ್‌ಗಳಿಗೆ ಎಪಿಕೆ ಫೈಲ್ ಕಳುಹಿಸಿಕೊಡುತ್ತಾರೆ. ಇದನ್ನು ಯಾರಾದರೂ ಓಪನ್ ಮಾಡಿದರೆ ಬ್ಯಾಂಕ್ ಖಾತೆದಾರನ ಮೊಬೈಲ್‌ಗೆ ಬರುವ ಎಲ್ಲ ಸಂದೇಶಗಳು ವಂಚಕರ ಮೊಬೈಲ್‌ಗಳಿಗೆ ಕೆಲವೇ ಹೊತ್ತಿನಲ್ಲಿ ರವಾನೆಯಾಗುತ್ತದೆ.

ಆ ಮೂಲಕ ವಂಚಕರು ಸುಲಭವಾಗಿ ಬ್ಯಾಂಕ್ ಒಟಿಪಿಯನ್ನೂ ಪಡೆದುಕೊಂಡು ಸಾರ್ವಜನಿಕ ಬ್ಯಾಂಕ್ ಖಾತೆಗಳಿಗೆ ಇಂಟರ್‌ನೆಟ್ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಅಳವಡಿಸಿಕೊಂಡು ಕ್ಷಣ ಮಾತ್ರದಲ್ಲಿ ಹಣವನ್ನು ತಮ್ಮ ಖಾತೆಗಳಿಗೆ ವರ್ಗಾಯಿಸಿಕೊಳ್ಳುತ್ತಿದ್ದಾರೆ.

### ಸಾರ್ವಜನಿಕರಿಂದ ಸಂದೇಶ

ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಗಳಿಗೆ ಬರುವ ಎಪಿಕೆ ಫೈಲ್ ಅಥವಾ ಆಂಡ್ರಾಯ್ಡ್ ಆ್ಯಪ್‌ಗಳ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ, ಆಂಡ್ರಾಯ್ಡ್ ಮೊಬೈಲ್‌ಗಳಲ್ಲಿ ಇನ್‌ಸ್ಟಾಲ್ ಅನ್‌ನೋನ್ ಆಪ್ಸನ್ನು ಡಿಸೇಬಲ್ ಮಾಡಬೇಕು ಎಂಬ ಸಂದೇಶ ಸಾರ್ವಜನಿಕ ವಲಯದಲ್ಲಿ ಹರಿದಾಡುತ್ತಿದೆ.

### ಒಂದೇ ತಿಂಗಳಲ್ಲಿ ನೂರಾರು ಪ್ರಕರಣ

ರ್‍ಯಾಟ್ ಸಿಸ್ಟಂನಲ್ಲಿ ಬ್ಯಾಂಕ್ ಖಾತೆಗೆ ಕನ್ನ ಹಾಕುವ ಪ್ರಕರಣ ಒಂದೇ ತಿಂಗಳಲ್ಲಿ ನೂರಕ್ಕೂ ಅಧಿಕವಾಗಿದೆ. ಜಾಗೃತಿ ಮೂಡಿಸುವುದೇ, ಅಪರಿಚಿತರಿಂದ ಬಂದ ಸಂದೇಶಗಳನ್ನು ನಿರ್ಲಕ್ಷ್ಯ ಮಾಡುವುದೇ ಸೂಕ್ತ ಪರಿಹಾರ ಎನ್ನುತ್ತಾರೆ ಅಧಿಕಾರಿಗಳು.

### ಜಾಲತಾಣದಲ್ಲಿ ಜಾಗೃತಿ

ಕರಾವಳಿ ಭಾಗದಲ್ಲಿ ರ್‍ಯಾಟ್ ಸಿಸ್ಟಂನಲ್ಲಿ ಬ್ಯಾಂಕ್ ಖಾತೆಗೆ ಕನ್ನ ಹಾಕುತ್ತಿರುವ ವಂಚನಾ ಪ್ರಕರಣಗಳು ಹೆಚ್ಚಾಗಿ ಪತ್ತೆಯಾಗಿದ್ದು, ಲಕ್ಷಾಂತರ ರೂಪಾಯಿ ಕಳೆದಕೊಂಡಿದ್ದಾರೆ. ಹಣ ಕಳೆದುಕೊಂಡ ಸಾರ್ವಜನಿಕರು ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇದು ಮಾತ್ರವಲ್ಲದೆ ಸಾಮಾಜಿಕ ಜಾಲತಾಣಗಳು ಜಾಗೃತಿ ಸಂದೇಶಗಳು ವೈರಲ್ ಆಗಿದೆ.

### ನಿಮ್ಮ ಖಾಸಗಿತನಕ್ಕೂ ಆಪತ್ತು

ಎಪಿಕೆ ಫೈಲ್‌ಗಳನ್ನು ನಿಮ್ಮ ಮೊಬೈಲ್‌ಗೆ ಇನ್‌ಸ್ಟಾಲ್ ಮಾಡಿದರೆ ಬ್ಯಾಂಕ್ ಖಾತೆಯಲ್ಲಿರುವ ಹಣ ಮಾತ್ರವಲ್ಲ ನಿಮ್ಮ ಖಾಸಗಿತನಕ್ಕೂ ಆಪತ್ತು ಎನ್ನುತ್ತಾರೆ



ಸೈಬರ್ ತಜ್ಞ ಮಂಗಳೂರಿನ ಅನಂತ್ ಪ್ರಭು.

ಬ್ಯಾಂಕ್‌ಗಳ ಆ್ಯಪ್ ಅಪ್ಡೇಟ್ ನೆಪದಲ್ಲಿ ವಾಟ್ಸ್‌ಆ್ಯಪ್, ಬ್ಲೂಟೂತ್ ಮೂಲಕ ಎಪಿಕೆ (ಅಂಡ್ರಾಯ್ಡ್ ಪ್ಯಾಕೇಜ್ ಫೈಲ್) ಫೈಲ್‌ನ್ನು ಸೈಬರ್ ವಂಚಕರು ಕಳುಹಿಸುತ್ತಾರೆ. ಅದು ಮೊಬೈಲ್‌ಗೆ ಇನ್‌ಸ್ಟಾಲ್ ಆದ ಬಳಿಕ ನಿಮ್ಮ ಮೊಬೈಲ್‌ನ ಸಮಗ್ರ ಮಾಹಿತಿ ವಂಚಕರ ಕೈ ಸೇರುತ್ತದೆ. ಸಾಮಾನ್ಯವಾಗಿ ಹಿಂದೆ ಟೀಮ್ ವೀವರ್, ಎನಿ ಡೆಸ್ಕ್‌ಗಳ ಮೂಲಕ ಈ ರೀತಿಯ ಕೃತ್ಯ ಮಾಡುತ್ತಿದ್ದರು.

ಮೊಬೈಲ್‌ನ ಮಾಹಿತಿ ಪಡೆದ ಬಳಿಕ ಬ್ಯಾಂಕ್ ಖಾತೆಯಲ್ಲಿರುವ ಹಣ ಲಪಟಾಯಿಸುತ್ತಾರೆ. ಇದು ಮಾತ್ರವಲ್ಲದೆ ನಿಮ್ಮ ಮೊಬೈಲ್‌ನ್ನು ನೀವು ಬಾತ್‌ರೂಂ, ಅಡುಗೆ ಕೋಣೆ, ಬೆಡ್‌ರೂಂ ಎಲ್ಲೇ ಕೊಂಡು ಹೋದರೂ ಆ್ಯಪ್ ಸಹಾಯದಿಂದ ಸೈಬರ್ ವಂಚಕರು ಕಂಟ್ರೋಲ್ ಮಾಡುತ್ತಾರೆ. ಇದರಿಂದ ಖಾಸಗಿತನ ಫೋಟೋ ತೆಗೆದು ಮತ್ತಷ್ಟು ಬ್ಲ್ಯಾಕ್ ಮೇಲ್ ಮಾಡುವ ಸಾಧ್ಯತೆ ಹೆಚ್ಚಿದೆ ಎನ್ನುತ್ತಾರೆ ಅನಂತ್ ಪ್ರಭು.

### ಏರೋಪ್ಲೇನ್ ಮೋಡ್‌ಗೆ ಹಾಕಿ

ಒಂದು ವೇಳೆ ಅಚಾನಕ್ ಆಗಿ ವಂಚಕರು ಕಳುಹಿಸಿದ ಎಪಿಕೆ ಫೈಲ್‌ನ್ನು ಕ್ಲಿಕ್ ಮಾಡಿದರೆ ತಕ್ಷಣ ನಿಮ್ಮ ಮೊಬೈಲ್‌ನ್ನು ಏರೋಪ್ಲೇನ್ ಮೋಡ್‌ಗೆ ಹಾಕಬೇಕು ಅಥವಾ ಕೂಡಲೇ ಸ್ವಿಚ್‌ಆಫ್ ಮಾಡಬೇಕು. ಇದಾದ ನಂತರ ನಿಮ್ಮ ಬ್ಯಾಂಕಿಗೆ ಸಂಪರ್ಕಿಸಿ ನಿಮ್ಮ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಬೇಕು.

ತಂತ್ರಜ್ಞಾನ ನಮಗಿಂತ ವೇಗವಾಗಿ ಬೆಳೆಯುತ್ತಿದ್ದು, ಅದರ ಸವಾಲು, ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರು ಎಚ್ಚೆತ್ತುಕೊಳ್ಳಬೇಕಾಗಿದೆ. ರಿಮೋಟ್ ಎಕ್ಸೆಸ್ ಟೂಲ್ಸ್ ಬಳಸಿ ಸೈಬರ್ ವಂಚನೆ ಮಾಡುತ್ತಿರುವ ಪ್ರಕರಣ ಕರಾವಳಿ ಮಾತ್ರವಲ್ಲದೆ ರಾಜ್ಯದ ಎಲ್ಲೆಡೆ ಕೇಳಿ ಬರುತ್ತಿದೆ. ನಾಗರಿಕರು ಅಪರಿಚಿತ ವ್ಯಕ್ತಿಯಿಂದ ಯಾವುದೇ ಲಿಂಕ್, ಸಂದೇಶ ಬಂದರೆ ಅದನ್ನು ಓಪನ್ ಮಾಡದೇ ಇರುವುದು ಹೆಚ್ಚು ಸುರಕ್ಷಿತವಾಗಿದೆ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▶▶ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಸಾಲಗಳ ಮೇಲೆ ವಿಧಿಸಬಹುದಾದ ಬಡ್ಡಿದರದ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕಿನ ಸುತ್ತೋಲೆಯನ್ನು ನಮಗೆ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ ಲಿ., ತಾಳಿಕೋಟೆ.**

**ಉತ್ತರ** : ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಸಾಲಗಳ ಮೇಲೆ ವಿಧಿಸಬೇಕಾಗಿದ್ದ ಕನಿಷ್ಠ ಬಡ್ಡಿದರಗಳ ಬಗ್ಗೆ ತನ್ನ ಮಾರ್ಗಸೂಚಿಯನ್ನು ತನ್ನ ದಿನಾಂಕ ಏಪ್ರಿಲ್ 29, 2001 ಮತ್ತು ಅಕ್ಟೋಬರ್ 29, 2002ರ ಸುತ್ತೋಲೆಯಲ್ಲಿ ರಿಜರ್ವ್ ಬ್ಯಾಂಕ್ ಹಿಂದಕ್ಕೆ ಪಡೆದಿದೆ. ಈಗ ಬ್ಯಾಂಕುಗಳು ಸಾಲಗಳ ಮೇಲೆ ಬಡ್ಡಿದರವನ್ನು ನಿರ್ಧರಿಸಲು ಸ್ವತಂತ್ರ ವಾಗಿವೆ. ಇದಕ್ಕಾಗಿ ತಮ್ಮ ಸಾಲದ ನೀತಿಯಲ್ಲಿ ಪೂರ್ಣ ವಿವರವಿದ್ದು ಗ್ರಾಹಕರಿಗೆ ಮುಂಚಿತವಾಗಿ ತಿಳಿಸಿರಬೇಕು.

**02. ಅಂಚೆ ಕಛೇರಿಯಲ್ಲಿ ನೀಡುವ ಭಾರತ ಸರ್ಕಾರದ ಗೋಲ್ಡ್ ಬಾಂಡ್‌ಗಳಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಹಣತೊಡಗಿಸಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಹಾಸನ**

**ಉತ್ತರ** : ಭಾರತೀಯ ರಿಜರ್ವ್ ಬ್ಯಾಂಕು ನೀಡುವ ಗೋಲ್ಡ್ ಬಾಂಡ್‌ಗಳಲ್ಲಿ ಕೇವಲ ವ್ಯಕ್ತಿಗಳು, ಹಿಂದೂ ಅವಿಭಾಜ್ಯ ಕುಟುಂಬಗಳು, ಟ್ರಸ್ಟ್‌ಗಳು, ವಿಶ್ವವಿದ್ಯಾಲಯಗಳು ಮತ್ತು ದತ್ತಿ ಸಂಸ್ಥೆಗಳು ಮಾತ್ರ ಹಣ ವಿನಿಯೋಗಿಸಬಹುದು. ಆದ್ದರಿಂದ, ಪಟ್ಟಣ ಸಹಕಾರ ಬ್ಯಾಂಕುಗಳು ಈ ಗೋಲ್ಡ್ ಬಾಂಡ್‌ಗಳನ್ನು ಖರೀದಿಸುವಂತಿಲ್ಲ.

## ಮೊದಲ ತ್ರೈಮಾಸಿಕ : ಶೇ.7.5 ರಷ್ಟು ಬೆಳವಣಿಗೆ ನಿರೀಕ್ಷೆ - ಆರ್‌ಬಿಐ

**ಮುಂಬೈ** : 2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ.7.5ರಷ್ಟು ಪ್ರಗತಿ ಕಾಣಲಿದೆ ಎಂದು ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿಯು ಅಂದಾಜಿಸಿದೆ.




ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಳದ ಜೊತೆಗೆ, ಆಹಾರೇತರ ಖರ್ಚಿನ ಏರಿಕೆಯಿಂದಾಗಿ ಈ ಪ್ರಗತಿ ಸಾಧ್ಯವಾಗಲಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಪೂರೈಕೆ ಸರಪಳಿಯು ಅಸ್ತವ್ಯಸ್ತಗೊಂಡಿದೆ. ಇದರ ನಡುವೆಯೂ ಭಾರತದ ಆರ್ಥಿಕತೆಯು ಚೇತರಿಕೆ ಕಂಡಿದೆ ಎಂದು ಹೇಳಿದೆ. ಆರ್ಥಿಕ ಚಟುವಟಿಕೆ ಸೂಚ್ಯಂಕದ ಪ್ರಕಾರ ಏಪ್ರಿಲ್‌ನಲ್ಲಿ ಆರ್ಥಿಕ ಚಟುವಟಿಕೆಗಳು ಸರಿಯಾದ ದಿಕ್ಕಿಗೆ ಮರಳಿವೆ. ದೇಶೀಯ ಬೇಡಿಕೆಯು ವೇಗ ಪಡೆದಿದೆ. ಇದು ಜಿಡಿಪಿ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಹೇಳಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನ ಏಪ್ರಿಲ್‌ನಲ್ಲಿ ಟೋಲ್ ಸಂಗ್ರಹದಲ್ಲಿ ಶೇ.8.6ರಷ್ಟು ಏರಿಕೆಯಾಗಿದೆ. ವಾಹನಗಳ ಮಾರಾಟದಲ್ಲಿ ಶೇ.25.4ರಷ್ಟು ಹೆಚ್ಚಳವಾಗಿದೆ. ಆಹಾರೇತರ ಖರ್ಚಿನ ಏರಿಕೆಯು ಗ್ರಾಮೀಣ ಪ್ರದೇಶದ ಚೇತರಿಕೆಗೆ ನೆರವಾಗಲಿದೆ ಎಂದು ಹೇಳಿದೆ. ಅಲ್ಲದೇ, ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಇಳಿಕೆಯಾಗಿದೆ. ಹಣದುಬ್ಬರವನ್ನು ಶೇ.4ರ ಮಿತಿಯಲ್ಲಿ ಕಾಯ್ದುಕೊಳ್ಳುವ ಆರ್‌ಬಿಐನ ಗುರಿಯತ್ತ ಸಾಗಿದೆ ಎಂದು ತಿಳಿಸಿದೆ.

## ಚಿನ್ನ, ಬೆಳ್ಳಿ ದರ ಮತ್ತೆ ಇಳಿಕೆ : 10 ಗ್ರಾಂ ಶುದ್ಧ ರೂ. 72,650




**ನವದೆಹಲಿ** : ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಮೂರನೇ ದಿನವಾದ ಶುಕ್ರವಾರವೂ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಕಂಡಿದೆ. 10 ಗ್ರಾಂನ 24 ಕ್ಯಾರೆಟ್ ಚಿನ್ನದ ದರ ರೂ. 900 ಕಡಿಮೆಯಾಗಿ ರೂ. 72,650 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿ.ಗೆ ರೂ. 500 ಇಳಿದು ರೂ. 92,100ಕ್ಕೆ ಕುಸಿದಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಬೆಲೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,340 ಡಾಲರ್ (ಅಂದಾಜು ರೂ. 1.94 ಲಕ್ಷ) ಮತ್ತು 30.45 ಡಾಲರ್‌ನಂತೆ (ಅಂದಾಜು ರೂ. 2,531) ಮಾರಾಟವಾಗಿದೆ. 'ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಕ್ಕೆ ಇನ್ನೂ ನಿರ್ಧರಿಸಿಲ್ಲ.

ಮತ್ತೊಂದೆಡೆ ಡಾಲರ್ ಸೂಚ್ಯಂಕ ಏರಿಕೆಯಾಗಿದೆ. ಹೂಡಿಕೆದಾರರು ಲಾಭ ಗಳಿಕೆಯತ್ತ ಚಿತ್ತ ನೆಟ್ಟಿದ್ದು, ಹಳದಿ ಲೋಹದ ಮಾರಾಟಕ್ಕೆ ಮುಂದಾಗಿದ್ದಾರೆ. ಹಾಗಾಗಿ, ಚಿನ್ನದ ಬೆಲೆಯಲ್ಲಿ ಇಳಿಕೆಯಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಎಲ್ಲಡೆ ಬೋರ್‌ವೆಲ್‌ಗಳು ನೀರಿಲ್ಲದೆ ಬತ್ತಿ ಹೋಗಿದ್ದರೆ, ಕೊಪ್ಪಳದ ಶಾಲೆಗಳು ಹಸಿರಿನಿಂದ ಕಂಗೊಳಿಸುತ್ತಿವೆ. ಕಳೆದ ಒಂದೂವರೆ ವರ್ಷದಲ್ಲಿ ಅಲ್ಲಿನ ಶಾಲೆಗಳ 30ಕ್ಕೂ ಹೆಚ್ಚು ಬತ್ತಿದ ಬೋರ್‌ವೆಲ್‌ಗಳಿಗೆ ಬೋರ್‌ವೆಲ್ ರೀಚಾರ್ಜ್ ತಜ್ಞ ಸಿಕಂದರ್ ಮೀರಾನಾಯಕ್ ಅವರ ನೇತೃತ್ವದಲ್ಲಿ ಮಳೆ ನೀರು ಇಂಗಿಸಲಾಗಿದ್ದು, ಅವರ ಕಾರ್ಯ ಶ್ಲಾಘನೆಗೆ ಪಾತ್ರವಾಗಿದೆ.
- ಬೇಸಿಗೆ ಧಗೆಗೆ ಉತ್ತರ ಭಾರತ ತತ್ತರಿಸಿ ಹೋಗಿದ್ದು, ದಿನೇ ದಿನೇ ಏರಿಕೆಯಾಗುತ್ತಿರುವ ತಾಪಮಾನಕ್ಕೆ ತತ್ತರಿಸಿದೆ. ರಾಜಸ್ತಾನದ ಬಾರ್ಮರ್‌ನಲ್ಲಿ 48.8 ಡಿಗ್ರಿ ತಾಪಮಾನವು ಜನರನ್ನು ಹೈರಾಣಾಗಿಸಿದ್ದು, 5 ಜನ ಉಷ್ಣ ಹವೆಗೆ ಬಲಿಯಾಗಿದ್ದಾರೆ.
- ಭಾರತೀಯರಲ್ಲಿ ಕಂಡುಬರುತ್ತಿರುವ ರೋಗಗಳಲ್ಲಿ ಶೇಕಡಾ 50ಕ್ಕೂ ಹೆಚ್ಚು ರೋಗಗಳು ಅನಾರೋಗ್ಯಕರ ಆಹಾರ ಕ್ರಮದಿಂದಾಗಿ ಬರುತ್ತವೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ ಮತ್ತು ರಾಷ್ಟ್ರೀಯ ಪೌಷ್ಟಿಕಾಂಶ ಸಂಸ್ಥೆ ಹೇಳಿದ್ದು, ದೇಶದಲ್ಲಿ ಸಾಂಕ್ರಾಮಿಕವಲ್ಲದ ರೋಗಗಳಿಂದ ಹೆಚ್ಚುತ್ತಿರುವ ಅಪಾಯದ ಬಗ್ಗೆ ಎಚ್ಚರಿಕೆ ನೀಡಿದೆ.
- 22 ಆರ್ಮಿಡಾಗ್ ಯುನಿಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 9 ವರ್ಷದ ನಿಷ್ಠಾವಂತ ಶ್ವಾನ ಮೇರು ತನ್ನ ವೃತ್ತಿಯಿಂದ ನಿವೃತ್ತಿ ಹೊಂದಿದ್ದಾನೆ. ನಿವೃತ್ತಿ ಬಳಿಕ ಅವನನ್ನು ಮೀರತ್‌ಗೆ ಗೌರವದಿಂದ ಬೀಳ್ಕೊಳ್ಳಲಾಯಿತು. ಮೇರು ತನ್ನ ನಿವೃತ್ತಿಯ ಜೀವನವನ್ನು ಮೀರತ್‌ನಲ್ಲಿರುವ ರಿಮೌಂಟ್ ಆಂಡ್ ವೆಟರ್ನರಿ ಕಾರ್ಪ್ಸ್ ಕೇಂದ್ರದಲ್ಲಿ ಕಳೆಯಲಿದ್ದಾನೆ.
- ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಅಂತಿಮವಾಗಿ ಎಲ್ಲ ಉದ್ಯೋಗಗಳನ್ನೂ ಇಲ್ಲವಾಗಿಸುತ್ತೆ ಎಂದು ಟೆಸ್ಲಾ ಸಂಸ್ಥೆಯ ಬಿಲಿಯನೇರ್ ಉದ್ಯಮಿ ಎಲಾನ್ ಮಸ್ಕ್ ಎಚ್ಚರಿಕೆ ನೀಡಿದ್ದಾರೆ. ಬಹುಶಃ ಮುಂದಿನ ದಿನಗಳಲ್ಲಿ ನಮ್ಮಲ್ಲಿ ಯಾರೊಬ್ಬರಿಗೂ ಉದ್ಯೋಗವೇ ಇರೋದಿಲ್ಲ ಎಂದೂ ಹೇಳಿದ್ದಾರೆ.
- ಗುಜರಾತ್ ರಾಜ್ಯದ ರಾಜ್‌ಕೋಟ್‌ನಲ್ಲಿರುವ ಗೇಮಿಂಗ್ ಜೋನ್ ಒಂದರಲ್ಲಿ ಮೇ 25ರ ಸಂಜೆ ಸಂಭವಿಸಿದ ಭೀಕರ ಅಗ್ನಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 27ಕ್ಕೆ ಏರಿಕೆಯಾಗಿದೆ. 9 ಮಕ್ಕಳು, ಮಹಿಳೆಯರು ಸೇರಿ 27 ಮಂದಿ ಮೃತಪಟ್ಟಿರುವ ಪ್ರಕರಣವು ದೇಶವನ್ನೇ ಬೆಚ್ಚಿಬೀಳಿಸಿದೆ.

## ಓ ದು ಗ ರ ಅ ನಿ ಸಿ ಕೆ . . .




**ಉಳಿತಾಯ ಹೇಗೆ ಸಾಧ್ಯ? :** ದೇಶದಲ್ಲಿ ಜನರ ಉಳಿತಾಯವು ಮೂರು ವರ್ಷದಲ್ಲಿ ರೂ. 9 ಲಕ್ಷ ಕೋಟಿಯಷ್ಟು ಇಳಿಕೆಯಾಗಿರುವುದಾಗಿ ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಂಕಿಅಂಶಗಳು ತಿಳಿಸಿವೆ. ಇದಕ್ಕೆ ಮುಖ್ಯ ಕಾರಣ, ಆಹಾರ ಪದಾರ್ಥ ಮತ್ತು ತರಕಾರಿ ಬೆಲೆಗಳು ಏರಿಕೆಯಾಗಿರುವುದರಿಂದ ದುಡಿದ ಹಣದಲ್ಲಿ ಇವುಗಳನ್ನು ಕೊಳ್ಳುವುದಕ್ಕೆ ಸಾಲದಿರುವಾಗ ಉಳಿತಾಯವು ಮಾಡುವುದು ಹೇಗೆ ಸಾಧ್ಯ?

**▶▶ ಅರುಣಾ ಕಟ್ಟಿಮನಿ ಎನ್., ಯಾದಗಿರಿ**

**ಪ್ರಶಸ್ತಿ–ಅಭಿನಂದನೆಗಳು :** ಇತ್ತಿಚೆಗೆ ಪುಣೆಯಲ್ಲಿ ಜರುಗಿದ 8ನೇ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಸಮ್ಮೇಳನದಲ್ಲಿ ನಮ್ಮ ರಾಜ್ಯದ ಹಲವಾರು ಪಟ್ಟಣ ಸಹಕಾರ ಬ್ಯಾಂಕುಗಳು 2023–24ನೇ ವರ್ಷದ ಅತ್ಯುತ್ತಮ ಪ್ರಶಸ್ತಿಗಳನ್ನು ಗಳಿಸಿ, ಸಹಕಾರ ಕ್ಷೇತ್ರಕ್ಕೆ ಗರಿ ಮೂಡಿಸಿವೆ. ಅತ್ಯುತ್ತಮ ಪ್ರಶಸ್ತಿ ಪಡೆದ ಎಲ್ಲ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ, ಮುಖ್ಯಕಾರ್ಯನಿರ್ವಹಣಾಧಿಕಾರಿ, ಅಧಿಕಾರಿ – ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳು.

**▶▶ ರಘುರಾಮ್ ಭಟ್, ಮಂಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.